Sri K.N. Nage Gowda:- The best method is, Essential ಆಕ್ಟನ್ನು ನಾವು ತೆಗೆದುಕೊಂಡು ಬರುತ್ತೇವೆ. ನಾನು ಹೇಳಿದ್ದೇನೆ, ಮಾರ್ಚ್ 31 ರೊಳಗೆ ಕಾಯಿದೆ ತೆಗೆದುಕೊಂಡು ಬಂದು ನಾವೇ ಮಾಡುತ್ತೇವೆ ಎಂದು ಹೇಳಿದ್ದೇನೆ. ಆ ಕಾಯಿದೆ ನೀವು ಮಾಡಿ ಕೂಟ್ಟ ಮೇಲೆ, ನಾವು ಖಂಡಿತವಾಗಿಯೂ ಈ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಮೂಡಬಿದ್ರಿಯ ಸರ್ಕಾರಿ ಪ್ರೌಢಶಾಲಾ ಕಟ್ಟಡದ ನಿರ್ಮಾಣ

111 (321) ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದ್ರಿ):-

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೂಡಬಿದ್ರಿಯ ಸರ್ಕಾರಿ ಪ್ರೌಢಶಾಲೆ ಪ್ರಾರಂಭಗೊಂಡು ಎಷ್ಟು ವರ್ಷಗಳಾದವು;

ಆ) ಈ ವಿದ್ಯಾಲಯವನ್ನು ಯಾವ ಕಟ್ಟಡದಲ್ಲಿ ನಡೆಸಲಾಗುತ್ತಿದೆ;

ಇ) ಈ ಕಟ್ಟಡದಲ್ಲಿ ಶಾಲೆಯನ್ನು ನಡೆಸಲು ಅಸಾಧ್ಯವಾಗಿದ್ದು, ಸ್ವಂತ ಕಟ್ಟಡದ ರಚನೆಗೆ ಸರ್ಕಾರ ಏನು ಕಾರ್ಯಕ್ರಮ ಕೈಗೊಂಡಿದೆ;

ಈ) ಮುಂದಿನ ವರ್ಷದಲ್ಲಿ ಈ ಕಟ್ಟಡದ ನಿರ್ಮಾಣಕ್ಕೆ ಸರ್ಕಾರವು ಹಣ ಒದಗಿಸುವುದೇ ?

ಡಾ।! ಹೆಗ್ಗಪ್ಪ ಡಿ. ಲಮಾಣ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):-

ಅ) 1984 ರಲ್ಲಿ ಪ್ರಾರಂಭಗೊಂಡಿರುತ್ತದೆ.

ಆ) ದಿನಾಂಕ: 14-11-92ರಿಂದ ಹೊಸದಾಗಿ ನಿರ್ಮಿಸಿದ 3 ಕೊಠಡಿಗಳಿರುವ ಸರ್ಕಾರಿ ಕಟ್ಟಡದಲ್ಲಿ ನಡೆಯುತ್ತಿದೆ.

ಇ) 6 ಕೊಠಡಿಗಳಿರುವ ಸರ್ಕಾರಿ ಕಟ್ಟಡವನ್ನು ನಿರ್ಮಿಸಲಾಗುತ್ತಿದ್ದು, ಇದರಲ್ಲಿ 3 ಕೊಠಡಿಗಳ ನಿರ್ಮಾಣವು ಪ್ರಗತಿಯಲ್ಲಿದೆ.

ಈ) ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಅಗತ್ಯತೆ ಇದ್ದಲ್ಲಿ ಹೆಚ್ಚುವರಿ ಕೊಠಡಿಗಳರಿ ನಿರ್ಮಾಣಕ್ಕೆ ಹಣ ಒದಗಿಸುವುದರ ಬಗ್ಗೆ ಪರಿಶೀಲಿಸಲಾಗುವುದು.

ಶ್ರೀ ಕೆ. ಸೋಮಪ್ಪ ಸುವರ್ಣ:- ಮಾನ್ಯ ಅಧ್ಯಕ್ಷರೇ, ಮೂಡಬಿದ್ರೆಯ ಪ್ರೌಢಶಾಲೆಗೆ ಮೂರು ಕೊಠಡಿಗಳನ್ನು ಕೊಡುತ್ತೇವೆಂದು ಸರ್ಕಾರದವರು ಹೇಳಿದ್ದರು, ಕೊಟ್ಟದ್ದು ಮಾತ್ರ ಒಂದೇ. ಆ ಶಾಲೆ ಒಂದು ಸಮಾಜ ಮಂದಿರದಲ್ಲಿ ನಡೆಯುತ್ತಾ ಇದ್ದು, ಮದುವೆಯಾಗುವಾಗ, ಅಲ್ಲಿ ಬ್ಯಾಂಡ್‌ನ ಶಬ್ದ ದಿಬ್ಬಣ ಬರುವಾಗ, ಹತ್ತೂವರೆ ಗಂಟೆಗೆ ಮಕ್ಕಳು ಶಾಲೆಯಿಂದ ಹೊರಗೆ ನಡೆದು, ಬ್ಯಾಗನ್ನು ಹಿಡಿದು ಪೇಟೆಯಲ್ಲಿ ಹೋಗುವಂಥ ಪರಿಸ್ಥಿತಿ ಇತ್ತು. ಆ ಶಾಲೆಗೆ ಊರಿನವರು 4 ಕೋಣೆಗಳನ್ನು ಕೊಟ್ಟರೆ, ಸರ್ಕಾರದವರು 2 ಕೋಣೆಗಳನ್ನು ಕೊಡುತ್ತೇವೆಂದು ಹೇಳಿದ್ದರು. ಊರಿನವರು 4 ಕೋಣೆಗಳನ್ನುಕಟ್ಟಿದರು. ಆದರೆ, ಸರ್ಕಾರದಿಂದ ಒಂದು ಕೋಣೆಗೆ ಮಾತ್ರ ಹಣ ಬಂತು. ಉಳಿದ ಒಂದು ಕೋಣೆಗೆ ಕಳೆದ ಒಂದು ವರ್ಷದಿಂದ ಬಾರದೆ ಅದಕ್ಕೆ ಕಿಟಕಿ, ಬಾಗಿಲುಗಳಿಲ್ಲದೆ, ಆ ಶಾಲೆಗೆ ಇನ್ನೂ ಸಹ ಪ್ರವೇಶ ಮಾಡಲಿಕ್ಕೆ ಆಗಲಿಲ್ಲ. ಕಡೆಗೆ ಅಲ್ಲಿನ ಸಮಾಜ ಮಂದಿರದವರು ಈ ಮಕ್ಕಳನ್ನು ಬಸ್ ಸ್ಟ್ಯಾಂಡಿನ ಹತ್ತಿರ ಇರತಕ್ಕ ಮಾಳಿಗೆ ಕರೆದುಕೊಂಡು ಹೋದರು. ಆದರೆ ಅಲ್ಲಿ ಪಾಠ ಮಾಡಲಿಕ್ಕೆ ಆಗುವುದಿಲ್ಲವೆಂದು ಹೇಳ, ಉಪಾಧ್ಯಾಯರು, ಮಕ್ಕಳು ಗಲಾಟೆ ಮಾಡಿದರು. ನಾವು ಕಿಟಕಿ, ಬಾಗಿಲು ಇಲ್ಲದಂಥ ಶಾಲೆಗೆ ಆ ಮಕ್ಕಳನ್ನು ಕರೆದುಕೊಂಡು ಹೋಗಬೇಕಾಗಿದೆ. ಇದರಿಂದ, ತಾವು ಭರವಸೆ

ಕೊಟ್ಟಂತೆ ಎರಡು ಕೋಣೆಗಳಲ್ಲಿ ಒಂದು ಕೋಣೆಗೆ 50 ಸಾವಿರ ಕೊಟ್ಟಿದ್ದೀರಿ, ಇನ್ನು 50 ಸಾವಿರ ಬರಬೇಕು. ಆ ಹಣವನ್ನು ಕೊಟ್ಟರೆ ಅದು ಪರಿಪೂರ್ಣವಾಗುತ್ತದೆ. ಇದರ ಬಗ್ಗೆ ತಾವು ಏನು ವ್ಯವಸ್ಥೆ ಮಾಡುತ್ತೀರಿ ಎಂಬುದನ್ನು ತಿಳಿಸಬೇಕು.

ಡಾ।। ಹೆಗ್ಗಪ್ಪ ಡಿ. ಲಮಾಣಿ:– ಸನ್ಮಾನ್ಯ ಅಧ್ಯಕ್ಷರೇ, ಈ ಮೂಡಬಿದರೆಯ ಸರ್ಕಾರಿ ಪ್ರೌಢಶಾಲೆಯು 1974ರಲ್ಲಿ ಪ್ರಾರಂಭವಾಯಿತು. ಮುಂದೆ 14–11–92ರವರೆಗೆ ಅದು ಒಂದು ಖಾಸಗಿ ಕಟ್ಟಡದಲ್ಲಿ ನಡೆಯುತ್ತಿತ್ತು. ಮುಂದೆ ಅದಕ್ಕೆ 6 ಕೊಠಡಿಗಳ ಒಂದು ಕಟ್ಟಡವೂ ಮಂಜೂರಾಯಿತು. ಸನ್ಮಾನ್ಯ ಸದಸ್ಯರು ಹೇಳಿದ ಹಾಗೆ, ನನಗೆ ಇಲ್ಲಿ ಮಾಹಿತಿ ಬಂದ ಪ್ರಕಾರ ಆರು ರೂಮಿನ ಒಂದು ಕಟ್ಟಡ ಮಂಜೂರಾಗಿದೆ. ಆದರಲ್ಲಿ ಮೂರು ರೂಮುಗಳನ್ನು ಈಗಾಗಲೇ ಕಟ್ಟಲಾಗಿದೆ. ಈಗಿರುವಂಥ ಮೂರು ರೂಮುಗಳಲ್ಲಿ ಅದು ನಡೆಯುತ್ತಾ ಇದೆ. ಇನ್ನು ಮೂರು ರೂಮು ಬೇಕು. ಏಕೆಂದರೆ, ಒಂದೊಂದು ತರಗತಿಗೆ 2–3 ಡಿವಿಜನ್ಸ್ ಇರುವುದರಿಂದ ಇನ್ನೂ ಮೂರು ರೂಮು ಬೇಕು. ಆ ಮೂರು ರೂಮುಗಳನ್ನೂ ಕೊಡುತ್ತೇನೆ. ಒಟ್ಟಿನಲ್ಲಿ 6 ರೂಮುಗಳನ್ನು ಕೊಟ್ಟು, ಆ ಹೈಸ್ಕೂಲು ಸುಸಜ್ಜಿತವಾಗಿ ನಡೆಯುವಂತೆ ಮಾಡುತ್ತೇವೆ. ಈ ವರ್ಷದಲ್ಲೇ ಈ ಕೆಲಸ ಮಾಡಿ, ಜೂನ್ ಹೊತ್ತಿಗೆ ಆ ಪ್ರೌಢಶಾಲೆಗಳಿಗೆ ಸರಿಯಾದ ರೀತಿಯಲ್ಲಿ ಕೊಠಡಿಗಳನ್ನು ಕಟ್ಟಿಸಿಕೊಡುತ್ತೇವೆ.

ಗ್ರಾಮಾಂತರ ಪ್ರದೇಶದಲ್ಲಿ ಗುತ್ತಿಗೆಯ ಆಧಾರದ ಮೇಲೆ ವೈದ್ಯರುಗಳ ನೇಮಕ

112 (201) ಶ್ರೀ ಗುರುಪಾದಪ್ಪ ನಾಗ್ಮಾರಪಳ್ಳಿ (ಔರಾದ್):-

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಿಂದಿನ ಸರ್ಕಾರವು ಗ್ರಾಮಾಂತರ ಪ್ರದೇಶದಲ್ಲಿ ವೈದ್ಯರನ್ನು ಕೊರತೆಯನ್ನು ತುಂಬಲು ಗುತ್ತಿಗೆ ಆಧಾರದ ಮೇಲೆ ವೈದ್ಯರನ್ನು ನೇಮಕ ಮಾಡಿಕೊಂಡಿತ್ತೆ, ಹಾಗಿದ್ದಲ್ಲಿ ಎಷ್ಟು ವೈದ್ಯರುಗಳನ್ನು ನೇಮಕಾತಿ ಮಾಡಿಕೊಳ್ಳಲಾಗಿತ್ತು;

ಆ) ಆ ನೇಮಕಾತಿಗಳು ಈಗ ಅಸ್ತಿತ್ವದಲ್ಲಿವೆಯೇ ? ಹಾಗಿಲ್ಲದಿದ್ದಲ್ಲಿ ಅವುಗಳನ್ನು ರದ್ದುಗೊಳಿಸಲಾಗಿದೆಯೇ;

ಇ) ಹಾಗಿದ್ದಲ್ಲಿ ಪುನಃ ಈ ಮೇಲ್ಕಂಡ ರೀತಿಯಲ್ಲಿ ವೈದ್ಯರುಗಳನ್ನು ನೇಮಕಾತಿ ಮಾಡಿಕೊಳ್ಳಲಾಗುವುದೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):-

ಅ) ಹೌದು. 380 ವೈದ್ಯರನ್ನು ನೇಮಕ ಮಾಡಿಕೊಳ್ಳಲಾಗಿದೆ.

ಆ) ಹೌದು. 380 ವೈದ್ಯರನ್ನು ನೇಮಕ ಮಾಡಿದ್ದು ಇವರಲ್ಲಿ 288 ವೈದ್ಯರು ಹಾಜರಾಗಿರುತ್ತಾರೆ. ವರದಿ ಮಾಡಿಕೊಂಡಿರುವ ವೈದ್ಯರುಗಳ ನೇಮಕಾತಿ ಆವವನ್ನು ನೇಮಕಾತಿ ಮಾಡಿಕೊಂಡ ಕಾಂಟ್ರಾಕ್ಟ್ ಅವಧಿಯವರೆಗೆ ಅಸ್ತಿತ್ವದಲ್ಲಿರುತ್ತವೆ.

ಇ) ಈ ವಿಷಯವನ್ನು ಪರಿಶೀಲಿಸಲಾಗುವುದು.

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ:– ಮಾನ್ಯ ಅಧ್ಯಕ್ಷರೇ, ನಾನು ಗುತ್ತಿಗೆ ಆಧಾರದ ಮೇಲೆ ಎಷ್ಟು ಡಾಕ್ಟರುಗಳನ್ನು ನೇಮಕ ಮಾಡಲಾಗಿದೆ ಎಂದು ಕೇಳಿದ್ದಕ್ಕೆ ಅವರು 280 ಎಂದು ಹೇಳಿದ್ದಾರೆ. ಮೇಲೆ 278ತೆಗೆದುಕೊಂಡಿದ್ದೇವೆ, ಆದರಲ್ಲಿ ಕೆಲವು ಜನ ಹಾಗೆಯೇ ಉಳಿದಿದ್ದಾರೆ ಎಂದು ಹೇಳಿದ್ದಾರೆ.